'ಹಾಂ... ನೆನಪಾಯಿತು... ನಿನ್ನಪ್ಪ ಕುಡಿದು ಮಗನ ಜವಾಬ್ದಾರಿ ಮರೆತಾಗ ಸಿಡುಕಿನಲ್ಲಿ ನಾಲ್ಕು ಬೈದಿರಬಹುದು. ಅದನ್ನೆಲ್ಲ ಮರೆತು ಬಿಡು. ನೀನು ಓದಿ ಮೇಲೆ ಬಂದಿದ್ದೀಯಲ್ಲ, ಅದು ಸಂತೋಷ. ವಿದ್ಯಾರ್ಥಿ ಅಂದ ಕೂಡಲೇ ನನಗೆ ಅಭ್ಯಾಸ ಬಲದಲ್ಲಿ ಏಕವಚನವೇ ಬರುವುದು. ತಪ್ಪಾಗಿ ತಿಳಿದುಕೊಳ್ಳಬೇಡಿ. ಈಗ ಏನು ಮಾಡಿಕೊಂಡಿದ್ದೀರಿ?' ಅಂದರು ಮಾಸ್ತರರು.

'ಸರ್, ನಾನು ಶಿಕ್ಷಣ ಇಲಾಖೆಯಲ್ಲಿ ಜವಾಬ್ದಾರಿಯುತ ಹುದ್ದೆಯಲ್ಲಿದ್ದೇನೆ. ಉತ್ತಮ ಶಿಕ್ಷಕರನ್ನು ರಾಜ್ಯ ಪ್ರಶಸ್ತಿಗೆ ಆಯ್ಕೆ ಮಾಡಿಸುವ ಹೊಣೆಗಾರಿಕೆಯೂ ನನ್ನದೇ. ಈಗ ಪ್ರಶಸ್ತಿಗೆ ಆಯ್ಕೆ ಮಾಡುವ ಸಮಯ. ಮಂತ್ರಿಗಳು, ಎಮ್ಮೆಲ್ಲೆಗಳು ಎಂಪಿಗಳು ಹಾಗೂ ಇತರ ಪ್ರಭಾವಿಗಳ ಶಿಫಾರಸುಗಳೊಂದಿಗೆ ಶಿಕ್ಷಕರು ದಿನಾ ಬಂದು ಕಾಲು ಹಿಡಿಯುತ್ತಿದ್ದಾರೆ. ತುಂಬಾ ಒತ್ತಡ. ಆದರೆ ಇದೆಲ್ಲದರ ನಡುವೆಯೂ ನನಗೊಂದು ಆಸೆ. ನನ್ನ ಶಿಕ್ಷಕರೊಬ್ಬರಿಗೂ ಈ ಬಾರಿ ಪ್ರಶಸ್ತಿ ಕೊಡಿಸಬೇಕು ಅನ್ನೋದು. ನೀವು ಬರೇ ಅರ್ಜಿ ಸಹಿ ಮಾಡಿ ಕೊಟ್ಟರೆ ಸಾಕು, ಉಳಿದೆಲ್ಲ ಪ್ರಯತ್ನ ನನ್ನದು. ಆಯ್ಕೆ ಸಮಿತಿ ಇದೆ, ಮಂತ್ರಿಗಳಿದ್ದಾರೆ ಆದರೂ ಲಿಸ್ಟಿನಲ್ಲಿ ನಿಮ್ಮ ಹೆಸರು ಸೇರಿಸಬಲ್ಲೆ ಎಂಬ ಧೈರ್ಯ ನನಗಿದೆ' ಅಂದರು ದಾಮೋದರ್.

'ಹೋ.' ಎಂದು ಬಾಯಿ ಅಗಲಿಸಿ ನಕ್ಕರು ಮಾಸ್ತರರು. 'ಪಾಠ ಹೇಳುವ ಕೆಲಸ ಮಾಡಿದ್ದಕ್ಕೆ ಸಂಬಳ ಪಡೆಯುತ್ತಿದ್ದೇನೆ. ನಿವೃತ್ತಿಯ ಅಂಚಿನಲ್ಲಿದ್ದೇನೆ. ನನಗೆ ಪ್ರಶಸ್ತಿ ಸಿಕ್ಕಿ ಆಗಬೇಕಾದ್ದೇನೂ ಇಲ್ಲ, ಯಾರಿಗೆ ಆಸಕ್ತಿಯಿದೆಯೋ ಅವರಿಗೇ ಕೊಟ್ಟುಬಿಡಿ' ಅಂದರು ಮಾಸ್ತರರು.

'ಯಾಕೆ ಸರ್ ಹಾಗೆ ಹೇಳುವುದು ನೀವು? ನಮ್ಮ ಆಫೀಸಿಗೆ ಬಂದು ನೋಡಿ, ದಿನವೂ ಡಜನ್ ಗಟ್ಟಲೆ ಶಿಕ್ಷಕರು ತಮ್ಮ ಫೈಲು ಹಿಡಿದು ಓಡಾಡುತ್ತಿದ್ದಾರೆ. ನನ್ನನ್ನು ಮನೆಯಲ್ಲಿ ಕೂರಿಸಿ ಪಾಠ ಹೇಳಿದ ನಿಮಗೂ ಪ್ರಶಸ್ತಿ ಕೊಡಿಸಬೇಕು ಎನ್ನುವುದು ನನ್ನ ಹಿರಿಯಾಸೆ. ಒಪ್ಪಿಕೊಳ್ಳಿ' ಎಂದರು ದಾಮೋದರ್.

'ನಾನು ಹಣವಂತರ ಮಕ್ಕಳಿಗೆ ಮನೆಪಾಠ ಹೇಳಿಕೊಡುತ್ತಿದ್ದದ್ದು. ನೀವು ಬಂದು ಅಲ್ಲಿ ಕುಳಿತು ಕಲಿತದ್ದು. ನಾನೇನೂ ನಿಮಗಾಗಿ ಪಾಠ ಮಾಡಿದ್ದಲ್ಲ. ಅವರಿಂದ ಫೀಸು ತೆಗೆದುಕೊಂಡಿದ್ದೇನೆ. ನಿಮ್ಮಪ್ಪನ ಮೇಲೆ ಕೋಪಿಸಿಕೊಳ್ಳುತ್ತಿದ್ದದ್ದು ವಿನಾಕಾರಣ ಆತ ನನಗೆ ನಿಮ್ಮನ್ನು ಮನೆ ತಲುಪಿಸುವ ಹೆಚ್ಚುವರಿ ಕೆಲಸ ಹಚ್ಚಿದನಲ್ಲ ಎನ್ನುವ ಕಾರಣಕ್ಕಾಗಿ. ಆಗೆಲ್ಲ ನನಗೆ ವಿಪರೀತ ಕೋಪ. ಸರ್ಕಾರಿ ಸಂಬಳ ಪಡೆಯುವ ಅಧ್ಯಾಪಕ ನಾನು. ಖಾಸಗಿಯಾಗಿ ಟ್ಯೂಶನ್ ಕೊಡುವುದು ನಿಯಮಬಾಹಿರ ವ್ಯವಹಾರ. ಹೆಚ್ಚುವರಿ ಖರ್ಚು ತುಂಬಿಸಿಕೊಳ್ಳುವುದಕ್ಕೆ ನನಗಿದ್ದ ಒಂದೇ ಮಾರ್ಗ ಟ್ಯೂಶನ್. ಪುಣ್ಯಕ್ಕೆ ಯಾವತ್ತೂ ಸಿಕ್ಕಿ ಹಾಕಿಕೊಳ್ಳಲಿಲ್ಲ. ಮಗ ಕಾಲೇಜು ಮುಗಿಸಿದ ವರ್ಷದಿಂದ ನಿಲ್ಲಿಸಿಬಿಟ್ಟೆ. ನನಗೆ ಪ್ರಶಸ್ತಿ ನೀಡಿದರೆ ಟ್ಯೂಶನ್ ಕೊಟ್ಟವರಿಗೆ ಪ್ರಶಸ್ತಿ ನೀಡಿದರು ಎಂಬ ಅಪವಾದ ಖಂಡಿತ ಬರುತ್ತೆ. ಸುಮ್ಮನೆ ಸಮಸ್ಯೆಗಳನ್ನು ನಾವು ಮೈಮೇಲೆ ಎಳೆದುಕೊಳ್ಳುವುದು ಯಾಕೆ? ಇರುವ ಸಮಸ್ಯೆಗಳನ್ನು ನಿಭಾಯಿಸುವುದೇ ಸಾಧ್ಯವಾಗದೆ ನಾನು ಮುರುಟಿ ಹೋಗಿದ್ದೇನೆ' ಎಂದರು ಆತ.

'ನಿಮ್ಮ ಕಡೆಯಿಂದ ಸ್ವಲ್ಪ ದಾಖಲೆಗಳು ಸಾಕು. ನಿಮಗೇನೂ ಹೆಚ್ಚು ಪ್ರಯಾಸವಾಗದ ಹಾಗೆ ನಾನು ನೋಡಿಕೊಳ್ಳುತ್ತೇನೆ ಸಾರ್' ಅಂದರು ದಾಮೋದರ್.

'ಹದಿನೈದು ವರ್ಷದ ಹಿಂದೆಯಾಗಿದ್ದರೆ ಹುರುಪಿನಿಂದ ನಿಮ್ಮ ಹಿಂದೆ ಓಡೋಡಿ ಬರುತ್ತಿದ್ದೆ. ಪ್ರಶಸ್ತಿಗಾಗಿ ಟ್ಯೂಶನ್ನಿನಲ್ಲಿ ಸಿಕ್ಕಿದ ಹತ್ತಾರು ಸಾವಿರ ಖರ್ಚೂ ಮಾಡುತ್ತಿದ್ದೆ. ನಾಳೆಗಳನ್ನು ಎದುರು ನೋಡುತ್ತಿದ್ದ ಕಾಲ ಅದು. ಈಗ ಹಾಗಲ್ಲ. ಜೀವನ ಸಂಪೂರ್ಣ ಬದಲಾಗಿ ಹೋಗಿದೆ. ಈಗ ಇವತ್ತಿನ ದಿನ ಮುಗಿಸುವುದೇ ಹರಸಾಹಸ ಅನ್ನಿಸುತ್ತಿದೆ. ಹೆಂಡತಿ ಕಾಲೆತ್ತಿ ನಡೆಯಲಾಗದೆ ಆಸ್ಪತ್ರೆಯಲ್ಲಿ